

# ನಿಮ್ಮ ಕರೆಯುವಿಕೆಯನ್ನು ರಾಜೀ ಮಾಡಿಕೊಳ್ಳಬೇಡಿರಿ

ಅಶೀಷ್ ರಾಯಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2024

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು - ಜೆ.ವಿ - ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿವರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್‌ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books
**ಚರ್ಚ್ ಆಪ್:** apcwo.org/app | **ಸತ್ಯವೇದ ಕಾಲೇಜು:** apcbiblecollege.org
**ಇ-ಕಲಿಕೆ:** apcbiblecollege.org/elearn | **ಸಲಹಾ ಸೇವೆ:** chrysalislife.org
**ಸಂಗೀತ:** apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
**ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada - Don’t Compromise Your Calling)

# ನಿಮ್ಮ ಕರೆಯುವಿಕೆಯನ್ನು
# ರಾಜೀ ಮಾಡಿಕೊಳ್ಳಬೇಡಿರಿ

# ಪರಿವಿಡಿ


ಪರಿಚಯ

1. ಈ ಪ್ರಪಂಚದ ಕಾಳಜಿಗಳು 1

2. ಬಂಧಿಸುವ ಸಂಬಂಧಗಳು 3

3. ತಣ್ಣಗಾಗಿರುವ ಒಂದು ಪ್ರೀತಿ 5

4. ಸ್ವೀಕರಿಸಲ್ಪಡಬೇಕೆಂಬ ಬಯಕೆ 7

5. ಮನುಷ್ಯನ ರೀತಿಯಲ್ಲಿ ಮಾಡುವದು 8

6. ತುಂಬಾ ಶ್ರೇಷ್ಟವಾದ ಒಂದು ಕ್ರಯ 10

7. ಭಯ—ಒಂದು ಮಾರಣಾಂತಿಕ ಶತ್ರು 12

8. ತೀರ್ಮಾನವು ನಿಮ್ಮದು 14

# ಪರಿಚಯ

ನಮ್ಮ ಪ್ರತಿಯೊಬ್ಬರ ಕುರಿತು ದೇವರಿಗೆ ಒಂದು ನಿರ್ಧಿಷ್ಟವಾದ ಯೋಜನೆಯಿದೆ. ದೇವರ ನಿರ್ಧಿಷ್ಟವಾದ ಯೋಜನೆಯೇನೆಂದರೆ ನಮ್ಮ ಜೀವಿತಗಳ ಮೇಲಿರುವ ಆತನ ಕರೆಯಾಗಿದೆ ಎಂದು ನಮ್ಮಲ್ಲಿ ಅನೇಕರು ನಂಬುತ್ತೇವೆ ಮತ್ತು ತಿಳುಕೊಂಡಿದ್ದೇವೆ. ಮುಂದೆ, ನಮ್ಮ ಕುರಿತಾಗಿರುವ ದೇವರ ಯೋಜನೆಯ ನೆರವೇರುವಿಕೆಯು ಆಕಸ್ಮಿಕವಲ್ಲಾ ಎಂದು ನಾವು ತಿಳಿದ್ದಿದ್ದೇವೆ. ಬೇರೆ ಪದಗಳಲ್ಲಿ ಹೇಳುವದಾದರೆ, ನಮ್ಮ ಜೀವಿತಗಳ ಮೇಲಿರುವ ದೇವರ ಕರೆಯುವಿಕೆಯನ್ನು ನೆರೆವೇರಿಸುವದಕ್ಕೆ ನಮಗೊಂದು ಪಾತ್ರವಿದೆ. ವ್ಯಕ್ತಿಗಳಾದ ನಮ್ಮಲ್ಲಿಯೂ ಮತ್ತು ನಮ್ಮ ಮೂಲಕವೂ ಆತನ ಯೋಜನೆಗಳು ನೆರವೇರಲಿಕ್ಕೆ ನಾವು ದೇವರೊಂದಿಗೆ ಸಹಕರಿಸಬೇಕು.

ದೇವರು ನಮ್ಮನ್ನು ಏನು ಮಾಡಬೇಕೆಂದು ಕರೆದಿದ್ದಾನೆ ಎಂಬುದರ ಮಹತ್ವ ಅಥವಾ ಪ್ರಮಾಣ ಪ್ರಾಮುಖ್ಯವಲ್ಲಾ, ಆದರೆ ನಾವು ಆ ಕರೆಯುವಿಕೆಯನ್ನು ನೆರವೇರಿಸುವ ಸತ್ಯಾಂಶದಲ್ಲಿದೆ ಎಂದು ನಾವು ಗ್ರಹಿಸಬೇಕು. ನಮ್ಮಲ್ಲಿ ಕೆಲವರು "ದೊಡ್ಡ" ಸಂಗತಿಗಳನ್ನು ಮಾಡಲು ಕರೆಯಲ್ಪಟ್ಟಿರಬಹುದು; ಇತರರು "ಸಣ್ಣ" ಸಂಗತಿಗಳನ್ನು ಮಾಡಲು ಕರೆಯಲ್ಪಟ್ಟಿರಬಹುದು. "ದೊಡ್ಡದು" ಮತ್ತು "ಸಣ್ಣದು" ಮನುಷ್ಯನ ಕಣ್ಣುಗಳಲ್ಲಿ ಮಾತ್ರ ಕಂಡುಬರುವಂತದ್ದಾಗಿದೆ. ದೇವರ ಕಣ್ಣುಗಳಲ್ಲಿ "ದೊಡ್ಡವು" ಮತ್ತು "ಸಣ್ಣವುಗಳು" ಸಮಾನವಾಗಿ ಪ್ರಾಮುಖ್ಯವಾಗಿದೆ. "ದೊಡ್ಡ" ಸಂಗತಿಗಳನ್ನು ಮಾಡಲು ಕರೆಯಲ್ಪಟ್ಟವರು ಮತ್ತು "ಸಣ್ಣ" ಸಂಗತಿಗಳನ್ನು ಮಾಡಲು ಕರೆಯಲ್ಪಟ್ಟವರು ತಮ್ಮ ಕರೆಯನ್ನು ನೆರವೇರಿಸುವ ವಿಷಯದಲ್ಲಿ ಆತನು ಉತ್ಸುಕನಾಗಿದ್ದಾನೆ. "ದೊಡ್ಡವರು" ಮತ್ತು "ಸಣ್ಣವರು" ಪರಸ್ಪರ ಅವಲಂಬಿತರು ಮತ್ತು ಒಬ್ಬರಿಗೊಬ್ಬರು ಆತುಕೊಂಡವರಾಗಿದ್ದಾರೆ. ಒಬ್ಬನು ಸೋತರೆ, ಮತ್ತೊಬ್ಬನಿಗೆ ಪರಿಣಾಮ ಬೀರುತ್ತದೆ. ದೊಡ್ಡ ಜನಸ್ತೋಮಗಳಿಗೆ ಪ್ರಸಂಗಿಸುವ "ದೊಡ್ಡ" ಸುವಾರ್ತಿಕನು ಧ್ವನಿವರ್ಧಕ ವ್ಯವಸ್ತೆಯನ್ನು ಮಾಡುವ "ಸಣ್ಣ" ಅಜ್ಞಾತ ತಂತ್ರಜ್ಞನನ್ನು ಆತುಕೊಂಡಿದ್ದಾನೆ. ಆ ತಂತ್ರಜ್ಞನು ತನ್ನ ಪಾತ್ರವನ್ನು ಮಾಡಲು ಸೋತು ಹೋದರೆ ಅಥವಾ ಅದನ್ನು ಕೆಟ್ಟದಾಗಿ ಮಾಡಿದರೆ ಏನಾಗುತ್ತದೆ?

ಹೇಗಿದ್ದರೂ, “ದೊಡ್ಡ” ಅಥವಾ “ಸಣ್ಣ” ಸಂಗತಿಗಳನ್ನು ಮಾಡಲು ಕರೆಯಲ್ಪಟ್ಟ ನಾವೆಲ್ಲರೂ ದೇವರ ಕರೆಯುವಿಕೆಯನ್ನು ನೆರವೇರಿಸಲು ನಮ್ಮನ್ನು ತಡೆಮಾಡುವ ಸವಾಲುಗಳನ್ನು ನಾವು ಎದುರಿಸುವವರಾಗಿದ್ದೇವೆ. ನಂತರ, ದೇವರ ಕರೆಯುವಿಕೆಯನ್ನು ಹಿಂದಟ್ಟದಂತೆ ನಮಗೆ ಅಡ್ಡಿಯನ್ನುಂಟು ಮಾಡಲು ಪ್ರಯತ್ನಿಸುವ ದೆವ್ವವಿದೆ. ನಮ್ಮಲ್ಲಿ ಕೆಲವರು ವೈರಾಗ್ಯದಿಂದ ದೇವರ ಯೋಜನೆಯನ್ನು ಹಿಂಬಾಲಿಸಲು ಪ್ರಾರಂಭಿಸಿದವರು ಹೇಗೊ ರಾಜೀಯಾಗಿದ್ದೇವೆ ಮತ್ತು ಎಡಬಿಡದೆ ಆತನ ಯೋಜನೆ ಹಿಂದಟ್ಟುವದನ್ನು ಮುಂದುವರಿಸಲಿಲ್ಲ. ನಾವು ಹಾದಿಯಲ್ಲಿ ಎಲ್ಲೋ ನಿಂತು ಬಿಟ್ಟಿದ್ದೇವೆ. ನಾವು ವಿಚಲಿತರಾಗಿರಬಹುದು ಮತ್ತು ದೇವರ ರಾಜ್ಯವನ್ನು ಹಿಂದಟ್ಟುವ ಬದಲಾಗಿ ಯಶಸ್ಸು, ಸಂಪತ್ತು ಮತ್ತು ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು ಹಿಂದಟ್ಟುವದಕ್ಕಾಗಿ ನಾವು ನಮ್ಮ ಶಕ್ತಿಯನ್ನು ವ್ಯಯಿಸುತ್ತಿರಬಹುದು. ನಮ್ಮಲ್ಲಿ ಕೆಲವರು ನಮ್ಮ ದೈನಂದಿನ ಜೀವಿತದ ವ್ಯವಹಾರಗಳಲ್ಲಿ ಎಷ್ಟು ಸಿಲುಕಿಕೊಂಡಿದ್ದೇವೆ ಎಂದರೆ ಸ್ವರ್ಗೀಯ ಕರೆಗೆ ಪ್ರತಿಕ್ರಿಯಿಸಲು ನಾವು ನಿರ್ಲಕ್ಷ್ಯರಾಗಿದ್ದೇವೆ. ನಮ್ಮ ಬಳಿಗೆ ಬಂದ ಕರ್ತನ ವಾಕ್ಯ, ಪವಿತ್ರಾತ್ಮನು ನಮಗೆ ಕೊಟ್ಟ ಕನಸುಗಳು ಮತ್ತು ದರ್ಶನಗಳನ್ನು ಒಂದು ಮೂಲೆಯಲ್ಲಿ ಇಡಲಾಗಿದೆ. ಭಯ ಅಥವಾ ಅಪನಂಬಿಕೆಯ ನಿಮಿತ್ತದಿಂದ ಅವುಗಳು ಒಂದೇ ಮರೆಯಲ್ಪಟ್ಟಿದೆ ಅಥವಾ ಉದ್ದೇಶಪೂರ್ವಕವಾಗಿ ಅಲಕ್ಷ್ಯ ಮಾಡಲಾಗಿದೆ. ಈ ಪುಸ್ತಕದ ಉದ್ದೇಶ ನಮ್ಮನ್ನು ಕೆರಳಿಸುವದಾಗಿದೆ. ನಮ್ಮ ಮುಂದೆ ಇರಿಸಲಾಗಿರುವ ಓಟವನ್ನು ಮುಗಿಸದಂತೆ ಮತ್ತು ನಾವು ಶ್ರೇಷ್ಠ ಹೋರಾಟ ಮಾಡದಂತೆ, ನಾವು ಸಿಲುಕಿಕೊಳ್ಳಬಹುದಾದ ಕೆಲವು ಬಲೆಗಳ ಕುರಿತು ನಮ್ಮನ್ನು ಎಚ್ಚರಿಸುವದು ಇದರ ಉದ್ದೇಶವಾಗಿದೆ.

ದೇವರು ಆಶೀರ್ವದಿಸಲಿ!

ಆಶೀಷ್ ರಾಯಚೂರ್

# 1

# ಈ ಪ್ರಪಂಚದ ಕಾಳಜಿಗಳು

ಅಪೋಸ್ತಲನಾದ ಪೌಲನಿಗೆ ಸೇವೆಯಲ್ಲಿ ಆತನೊಂದಿಗೆ ಅನೇಕರು ಕೆಲಸ ಮಾಡಿದ್ದರು ಅಥವಾ ಅತನಿಗೆ ಸಹವರ್ತಿಗಳಾಗಿ ಅನೇಕರಿದ್ದರು ಮತ್ತು ಅವರ ಕುರಿತು ತನ್ನ ಬರವಣಿಗೆಗಳಲ್ಲಿ ಅವನು ಉಲ್ಲೇಖಿಸುತ್ತಾನೆ. ಅಂತಹ ಒಬ್ಬ ವ್ಯಕ್ತಿಯ ಬಗ್ಗೆ ಪೌಲನು ಮೂರು ಸ್ಥಳಗಳಲ್ಲಿ ಬರೆಯುತ್ತಾನೆ. ಪೌಲನು ದೇಮನನ್ನು ತನ್ನ "ಜೊತೆಸೇವಕ" ಎಂಬುದಾಗಿ ಫಿಲೆಮೋನನಿಗೆ ಬರೆದ ತನ್ನ ಪತ್ರಿಕೆಯಲ್ಲಿ (ಫಿಲೆಮೋನನಿಗೆ 1:24) ಉಲ್ಲೇಖಿಸುತ್ತಾನೆ ಮತ್ತು ಕೊಲೊಸ್ಸೆದವರಿಗೆ ಶುಭಾಶಯಗಳನ್ನು ಕಳುಹಿಸುವಾಗ ಅವನ ಹೆಸರನ್ನು ಸೇರಿಸುತ್ತಾನೆ (ಕೊಲೊಸ್ಸೆಯವರಿಗೆ 4:14). ಹೇಗಿದ್ದರೂ, ಮುಂದಿನ ಸಲ ಪೌಲನು ದೇಮನ ಹೆಸರನ್ನು ಉಲ್ಲೇಖಿಸುವಾಗ, ಅದು ಕೊನೆಯ ಬಾರಿ ಆಗಿತ್ತು, ಅವನು ಹೀಗೆ ಬರೆದನು, *"... ಯಾಕಂದರೆ ದೇಮನು ಇಹಲೋಕವನ್ನು ಪ್ರೀತಿಸಿ ನನ್ನನ್ನು ಬಿಟ್ಟು ಥೆಸಲೋನಿಕಕ್ಕೆ ಹೋದನು; ಕ್ರೆಸ್ಕನು ಗಲಾತ್ಯಕ್ಕೂ ತೀತನು ದಲ್ಮಾತ್ಯಕ್ಕೂ ಹೋದರು"* (2 ತಿಮೊಥೆಯನಿಗೆ 4:10). ಯಾರೋ ಒಬ್ಬನು ಪೌಲನೊಂದಿಗೆ ಒಳ್ಳೆಯ ಭಾಂದವ್ಯವಿದ್ದವನು ಮತ್ತು ಅವನ ಜೊತೆ ಸೇವಕನಾಗಿದ್ದವನು ಬಹಳವಾಗಿ ಲೋಕದಿಂದ ವಂಚಿಸಲ್ಪಟ್ಟದ್ದರಿಂದ ಸೇವೆಯನ್ನು ಮತ್ತು ಅಪೋಸ್ತಲ ಪೌಲನನ್ನು ತ್ಯಜಿಸಿ ಹೊರಟು ಹೋಗಿ ಲೋಕದಲ್ಲಿ ತನ್ನ ಯೋಜನೆಗಳನ್ನು ಹಿಂದಟ್ಟಿದನ್ನು ಊಹಿಸಿಕೊಳ್ಳಿರಿ.

ನಾವೆಲ್ಲರೂ ನಮ್ಮ ಹೃದಯಗಳನ್ನು ಈ ಪ್ರಪಂಚದ ಸೆಳೆಯುವಿಕೆಗಳಿಂದ ಮತ್ತು ಕಾಳಜಿಗಳಿಂದ ಕಾಪಾಡುವ ಅಗತ್ಯವಿದೆ. ಒಂದೆಡೆ, ಜೀವನವು ಬಹಳ ಸುಲಭವಾಗಿರುವಾಗ ಮತ್ತು ಆರಾಮದಾಯಕವಾಗಿರುವಾಗ ನಾವು ನಮ್ಮ ಸ್ವರ್ಗೀಯ ಕರೆಯುವಿಕೆಯನ್ನು ಹಿಂದಟ್ಟುವ ಅಗತ್ಯತೆಯನ್ನು ಮರೆತುಬಿಡುತ್ತೇವೆ. ಮತ್ತೊಂದೆಡೆ, ಜೀವನವು ನಮ್ಮ ಮೇಲೆ ಬಹಳ ಸಮಸ್ಯೆಗಳು ಮತ್ತು ಚಿಂತೆಗಳ ಭಾರವನ್ನು ಹಾಕುವಾಗ ಆ ಸವಾಲುಗಳನ್ನು ಜಯಿಸುವ ಮತ್ತು ಯಶಸ್ಸನ್ನು ಹೊಂದಿಕೊಳ್ಳುವ ಪ್ರಯತ್ನದಲ್ಲಿ ಎಷ್ಟು ಕಾರ್ಯನಿರತರಾಗಿರುತ್ತೇವೆ ಎಂದರೆ ನಾವು ನಮ್ಮ ಕರೆಯುವಿಕೆಯನ್ನೇ ಅಲಕ್ಷ್ಯ

ಮಾಡಿ ಬಿಟ್ಟಿರುತ್ತೇವೆ. ಯೇಸು ಹೇಳಿದನು, *"... ಇನ್ನು ಕೆಲವರು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಗಳೂ ಐಶ್ವರ್ಯದಿಂದುಂಟಾಗುವ ಮೋಸವೂ ಇತರ ವಿಷಯಗಳ ಮೇಲಣ ಆಶೆಗಳೂ ಒಳಗೆ ಸೇರಿ ಆ ವಾಕ್ಯವನ್ನು ಅಡಗಿಸಿಬಿಡುವದರಿಂದ ಫಲವನ್ನು ಕೊಡದೆ ಇರುತ್ತಾರೆ"* (ಮಾರ್ಕ 4:19). ನಿಮ್ಮ ಜೀವಿತಕ್ಕಾಗಿ ದೇವರು ನಿಮ್ಮೊಂದಿಗೆ ಮಾತನಾಡಿರುವ ವಾಕ್ಯಗಳನ್ನು ಈ ಲೋಕದ—ಸಮಸ್ಯೆಗಳು ಅಥವಾ ಅದರ ಇಚ್ಛೆಗಳು—ಕದ್ದು ಕೊಳ್ಳುವದಕ್ಕೆ ಅನುಮತಿಸಬೇಡಿರಿ!

# 2

# ಬಂಧಿಸುವ ಸಂಬಂಧಗಳು

ನಮ್ಮನ್ನು ಪ್ರೀತಿಸುವ ಮತ್ತು ಕಾಳಜಿ ವಹಿಸುವ ಕುಟುಂಬ ಮತ್ತು ಸ್ನೇಹಿತರನ್ನು ಹೊಂದಿರುವದು ಸುಂದರವಾದ ಸಂಗತಿಯಾಗಿದೆ, ಕೆಲವೊಮ್ಮೆ ಇದೇ ಸಂಬಂಧಗಳು ನಮ್ಮನ್ನು ಬಂಧಿಸಿ ದೇವರ ಕರೆಯನ್ನು ಹಿಂದಟ್ಟದಂತೆ ನಮ್ಮನ್ನು ಇಡುತ್ತವೆ. ಎಷ್ಟು ಜನ ಯೌವ್ವನಸ್ಥ ಯುವಕ ಮತ್ತು ಯುವತಿಯರು ತಮ್ಮ ತಂದೆ ಅಥವಾ ತಾಯಿಯ ಆಶೆಯನ್ನು ಪೂರೈಸುವದಕ್ಕೆ, ತಮ್ಮ ಸ್ವರ್ಗೀಯ ಕರೆಯುವಿಕೆಯನ್ನೇ ರಾಜೀ ಮಾಡಿಕೊಂಡಿದ್ದಾರೆ ಮತ್ತು ದೇವರು ಅವರಿಗಾಗಿ ಎಂದಿಗೂ ಉದ್ದೇಶಿಸದ ಸಂಗತಿಗಳನ್ನು ಹಿಂದಟ್ಟಿದ್ದಾರೆ. ಲೂಕನ ಸುವಾರ್ತೆಯು ಮುಂದಿರುವಂತವುಗಳನ್ನು ದಾಖಲು ಮಾಡುತ್ತದೆ, *"ಆತನು ಮತ್ತೊಬ್ಬನಿಗೆ - ನನ್ನನ್ನು ಹಿಂಬಾಲಿಸು ಎಂದು ಹೇಳಲು ಅವನು - ಸ್ವಾಮೀ, ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರಕ್ರಿಯೆಗಳನ್ನು ಮಾಡಿಬರುವಂತೆ ನನಗೆ ಅಪ್ಪಣೆಯಾಗಬೇಕು ಅಂದನು. ಆದರೆ ಆತನು ಅವನಿಗೆ - ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ, ನೀನಂತೂ ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು ಎಂದು ಹೇಳಿದನು. 61 ಇನ್ನೊಬ್ಬನು ಸಹ - ಸ್ವಾಮೀ, ನಿನ್ನನ್ನು ಹಿಂಬಾಲಿಸುತ್ತೇನೆ; ಆದರೆ ಮೊದಲು ನನ್ನ ಮನೆಯವರಿಗೆ ಹೇಳಿಬರುವದಕ್ಕೆ ನನಗೆ ಅಪ್ಪಣೆಯಾಗಬೇಕು ಅಂದನು. ಯೇಸು ಅವನಿಗೆ - ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು ಹೇಳಿದನು"* (ಲೂಕ 9:59–62).

ಕುಟುಂಬದ ಜವಾಬ್ದಾರಿಗಳು ನೆರವೇರಿಸುವದಕ್ಕಿಂತ ದೇವರ ಕರೆಯನ್ನು ನೆರವೇರಿಸುವದನ್ನು ಅದ್ಯತೆಯಾಗಿ ತೆಗೆದುಕೊಳ್ಳಬೇಕು. ನಮ್ಮ ಕುಟುಂಬಗಳನ್ನು ಅಲಕ್ಷ್ಯ ಮಾಡುವದಕ್ಕೆ ಮತ್ತು ಜವಾಬ್ದಾರಿಯಿಲ್ಲದವರಾಗಿರುವದಕ್ಕೆ ಇದು ಪರವಾನಿಗೆ ಅಲ್ಲ. ಅದಕ್ಕೆ ಬದಲಾಗಿ, ಇಲ್ಲಿ ಆದ್ಯತೆಯ ಕ್ರಮವು ಪ್ರಾಮುಖ್ಯವಾದದ್ದಾಗಿದೆ. ಇಹಲೋಕದ ಎಲ್ಲಾ ಸಂಬಂಧಗಳಿಗಿಂತ ಕರ್ತನಿಗೂ ಮತ್ತು ಆತನ ರಾಜ್ಯಕ್ಕೂ ನಮ್ಮ

ಸಮರ್ಪಣೆ ಮುಂದೆ ಬರುವಂತದ್ದಾಗಿದೆ. *“ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣತಮ್ಮಂದಿರು ಅಕ್ಕತಂಗಿಯರು ಇವರನ್ನೂ ತನ್ನ ಪ್ರಾಣವನ್ನು ಸಹ ಹಗೆಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು”* (ಲೂಕ 14:26). ದೇವರ ಕರೆಯುವಿಕೆಯನ್ನು ಹಿಂದಟ್ಟದಂತೆ ನಮಗೆ ಅಡ್ಡಿಯುಂಟು ಮಾಡುವ ಯಾವುದಾದರೂ ಸಂಬಂಧಗಳು ಅಥವಾ ಸ್ನೇಹತ್ವಗಳು ಇದೆಯೇ? ಒಂದು ವೇಳೆ ನಾವು ಸರಿಯಾಗಿ ಪ್ರಾರಂಭಿಸಿರಬಹುದು ಆದರೆ ನಮಗೆ ತಿಳಿಯದೆ ಇತರೆ ಕೆಲವೊಂದು ಲೌಕಿಕ ಸಂಬಂಧಗಳಿಗಿಂತ ಯೇಸುವಿಗೆ ಕಡಿಮೆ ಆದ್ಯತೆಯನ್ನು ನಿಗದಿಪಡಿಸಿದ್ದೇವೆ. ಇದು ಸಂಗತಿಗಳನ್ನು ಕ್ರಮ ಪಡಿಸುವ ಸಮಯ!! ಇಹಲೋಕದ ಸಂಬಂಧಗಳಿಗಾಗಿ ನಾವು ದೇವರ ಕರೆಯನ್ನು ತ್ಯಜಿಸಲು ಸಾಧ್ಯವಿಲ್ಲ.

# 3
# ತಣ್ಣಗಾಗಿರುವ ಒಂದು ಪ್ರೀತಿ

ಇಂದು ದೇವರಿಗಾಗಿ ನಿಮ್ಮ ದಾಹ ಎಷ್ಟು ಬಲವುಳ್ಳದಾಗಿದೆ? ಕರ್ತನ ಮನೆಗೂ ಮತ್ತು ದೇವರ ಸಂಗತಿಗಳಿಗೂ ನೀವು ಆಸಕ್ತಿಭರಿತರಾಗಿದ್ದೀರೋ? ಯೇಸುವಿನ ಬಗ್ಗೆ ಹೀಗೆ ಬರೆಯಲ್ಪಟ್ಟಿದೆ, *"ನಿನ್ನ ಆಲಯಾಭಿಮಾನವು ನನ್ನನ್ನು ಬೆಂಕಿಯಂತೆ ದಹಿಸಿದೆ"* (ಕೀರ್ತನೆಗಳು 69:9; ಯೋಹಾನ 2:17). ದೇವರನ್ನು ಹುಡುಕುವದು ಮತ್ತು ಆತನ ಸೇವೆ ಮಾಡುವದು ಅನೂಕೂಲದ ವಿಷಯಕ್ಕೊ, ಅದ್ಯತೆಗಾಗಿ ಅಲ್ಲವೋ? ನಿನಗೆ ಸಮಯವಿರುವಾಗ ಮಾತ್ರ ಪ್ರಾರ್ಥಿಸುತ್ತಿಯೋ ಅಥವಾ ನೀನು ಪ್ರಾರ್ಥಿಸುವದಕ್ಕಾಗಿ ಸಮಯವನ್ನು ಮಾಡಿಕೊಳ್ಳುತ್ತಿಯೋ? ಧಾರ್ಮಿಕ ಕಟ್ಟಳೆಗಳನ್ನು ಪೂರೈಸುವದರ ಮೂಲಕ ಮನಸಾಕ್ಷಿಯನ್ನು ಹಗುರ ಮಾಡುವದಕ್ಕಾಗಿ ಮಾತ್ರ ನೀನು ಸಭೆಗೆ ಹೋಗುತ್ತಿಯೋ ಅಥವಾ ಇದು ನಿನ್ನ ಆನಂದವಾಗಿರುವ ಕಾರಣದಿಂದ ನೀನು ಅದನ್ನು ಮಾಡುತ್ತಿಯೋ? ಕೀರ್ತನೆಗಾರನು ತನ್ನ ಹೃದಯವನ್ನು ವ್ಯಕ್ತಪಡಿಸುತ್ತಾ ಹೇಳಿದ್ದೇನಂದರೆ, *"ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸಮಾಡುತ್ತಾ ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನಮಾಡುವದಕ್ಕೂ ನನಗೆ ಅಪ್ಪಣೆಯಾಗಬೇಕೆಂಬ ಒಂದೇ ವರವನ್ನು ಯೆಹೋವನಿಂದ ಕೇಳಿಕೊಂಡು ಅದನ್ನೇ ಎದುರುನೋಡುತ್ತಿರುವೆನು"* (ಕೀರ್ತನೆಗಳು 27:4). ಅಥವಾ ಒಂದು ವೇಳೆ ನೀನು ದೇವರನ್ನು ಪ್ರೀತಿಸುತ್ತಿ ಎಂದು ಹೇಳುತ್ತಿ, ಆದರೆ ಬೆಂಕಿಯು ಮೊದಲಿದ್ದಷ್ಟು ಬಲವಾಗಿಲ್ಲ! ತಣ್ಣಗಾದ ಒಂದು ಪ್ರೀತಿಯು ಅನುಕೂಲವಾದದ್ದನ್ನು ಮಾಡುವ ಪ್ರೀತಿಯಾಗಿದೆ ಹೊರತು ಆತನು ಆಜ್ಞಾಪಿಸುವದನ್ನು ಮಾಡುವದಿಲ್ಲ. ನೀನು ಕೇವಲ ಅನುಕೂಲವಾದದ್ದನ್ನು ಮಾಡುತ್ತಾ ಇದ್ದು ಆತನು ಆಜ್ಞಾಪಿಸುವದನ್ನು ಮಾಡದಿದ್ದರೆ, ನೀನು ಎಂದಿಗೂ ಆತನ ಕರೆಯನ್ನು ನೆರವೆರಿಸಲು ಆಗುವದಿಲ್ಲ.

ಒಂದು ವೇಳೆ ನಾವು ದೇವರ ಕರೆಯುವಿಕೆಯನ್ನು ನೆರವೇರಿಸಬೇಕಾದರೆ, ನಮ್ಮ ಕರ್ತನಾದ ದೇವರನ್ನು ನಾವು ನಮ್ಮ ಪೂರ್ಣ ಹೃದಯದಿಂದ,

ಪ್ರಾಣದಿಂದ, ಮನಸ್ಸಿನಿಂದ ಮತ್ತು ಬಲದಿಂದ ಪ್ರೀತಿಸಬೇಕು (ಮಾರ್ಕ 12:30). ನಮ್ಮ ಪೂರ್ಣ ಹೃದಯದಿಂದ ಆತನನ್ನು ಹುಡುಕಲು ನಮ್ಮನ್ನೇ ನಾವು ಹುರಿದುಂಬಿಸಬೇಕು. ಆತನಿಗೆ ನಮ್ಮ ಅತ್ಯುತ್ತಮವಾದದ್ದನ್ನು ಕೊಡಲು ನಾವು ನಮ್ಮ ಅತ್ಯುತ್ತಮವಾದದ್ದನ್ನು ಮಾಡಬೇಕು.

# 4
# ಸ್ವೀಕರಿಸಲ್ಪಡಬೇಕೆಂಬ ಬಯಕೆ

ನಮ್ಮ ಜೀವಿತಗಳ ಮೇಲಿರುವ ದೇವರ ಕರೆಯುವಿಕೆಯನ್ನು ಹಿಂಬಾಲಿಸಿದಕ್ಕೆ ಎಲ್ಲರೂ ನಮ್ಮನ್ನು ಪ್ರಶಂಸಿಸುವದಿಲ್ಲ, ಹೊಗಳುವದಿಲ್ಲ ಮತ್ತು ಸ್ತುತಿಸುವದಿಲ್ಲ. ಜನರ ದೃಷ್ಟಿಯಲ್ಲಿ ಸ್ವೀಕೃತಿಯನ್ನು ಪಡೆಯುವದಕ್ಕಾಗಿ ಮಾತ್ರ ಜೀವಿಸುವದಾದರೆ, ನಮಗೆ ಹತ್ತಿರವಿರುವವರು ಸಹ ನಿರುತ್ಸಾಹಗೊಳ್ಳುತ್ತಾರೆ. ಆಗ, ದೇವರು ನಾವು ಏನನ್ನು ಮಾಡಲು ಬಯಸುತ್ತಾನೋ ಅದನ್ನು ಮಾಡಲು ನಾವು ಸ್ವತಂತ್ರರಾಗಿರುವದಿಲ್ಲ. ನಮ್ಮ ಪರಲೋಕದ ತಂದೆಯನ್ನು ಮೆಚ್ಚಿಸುವದು ನಮ್ಮ ಆದ್ಯತೆಯಾಗಿರಬೇಕು. ಯೇಸು ಹೇಳಿದನು, *"ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ?"* (ಯೋಹಾನ 5:41,44). ಜನರನ್ನು ಅಥವಾ ಸಂಘಟನೆಗಳನ್ನು (ಪಂಗಡಗಳನ್ನು ಸಹ) ಮೆಚ್ಚಿಸಬೇಕಾದ ಸ್ಥಿತಿಯಲ್ಲಿ ಬಹಳಷ್ಟು ಜನರು ತಮ್ಮನ್ನೆ ತಾವು ಹಾಕಿಕೊಂಡಿರುವ ಕಾರಣದಿಂದ ತಮ್ಮ ಜೀವಿತಗಳ ಮೇಲಿರುವ ದೇವರ ಕರೆಯುವಿಕೆಯನ್ನು ರಾಜೀ ಮಾಡಿಕೊಂಡಿದ್ದಾರೆ. ಆದಕಾರಣ ಕೆಲವೊಂದು ಹೊಸ ಸಂಗತಿಗಳನ್ನು, ಕೆಲವೊಂದು ವ್ಯತ್ಯಾಸಕರವಾದ ಸಂಗತಿಗಳನ್ನು, ಇತರರು ವಿಚಿತ್ರವಾಗಿ ಕಾಣುವ ಸಂಗತಿಗಳನ್ನು, ಮಾಡುವದಕ್ಕೆ ದೇವರು ಕರೆಯುವಾಗ ತಿರಸ್ಕಾರದ ಭಯದಿಂದ ಅವರು ಹೊರಗೆ ಹೆಜ್ಜೆಯಿಡಲು ಮತ್ತು ವಿಧೇಯರಾಗಲು ಸಾಧ್ಯವಾಗುವದಿಲ್ಲ. ನಾವು ಮೂರ್ಖತನವನ್ನು ಪ್ರತಿಪಾದಿಸುತ್ತಿಲ್ಲ, ದೇವಜನರು ಒಪ್ಪದಿರುವಾಗಲೂ ನಾವು ಇಷ್ಟಪಡುವದನ್ನೆ ನಾವು ಮಾಡುತ್ತಾ ಹೋಗುತ್ತೇವೆ. ಮನುಷ್ಯನ ಸ್ತುತಿಗಿಂತ ಮಿಗಿಲಾಗಿ ದೇವರಿಗೆ ವಿಧೇಯತೆಯನ್ನಿಡುವುದರ ಕುರಿತು ನಾವು ಇಲ್ಲಿ ಮಾತನಾಡುತ್ತಿದ್ದೇವೆ. ನೀನು ಇಂದು ಎಲ್ಲಿದ್ದೀ? ಮನುಷ್ಯನ ದೃಷ್ಟಿಯಲ್ಲಿ ಸ್ತುತಿಯನ್ನು ಪಡೆಯುವ ಅಗತ್ಯವಿಲ್ಲದೆ ದೇವರು ನಿನ್ನನ್ನು ಕರೆಯುವ ಯಾವುದನ್ನಾದರೂ ಮಾಡಲು ನಿನಗೆ ಸಾಧ್ಯವೇ?

# 5
# ಮನುಷ್ಯನ ರೀತಿಯಲ್ಲಿ ಮಾಡುವದು

ನಮ್ಮ ಜೀವಿತಗಳ ಉದ್ದೇಶದ ಕುರಿತು ಪರಲೋಕದಿಂದ ಕೇಳಿಸಿಕೊಳ್ಳುವದಷ್ಟೇ ಅಲ್ಲ, ಆದರೆ ಅಲ್ಲಿಗೆ ಹೇಗೆ ತಲುಪಬೇಕು ಎಂಬುದಕ್ಕೆ ದೇವರ ಮಾರ್ಗದರ್ಶನದ ಅಗತ್ಯ ಸಹ ನಮಗೆ ಬೇಕು. ಸ್ವಯಂ ರಚಿತ ವಿಧಾನಗಳಿಂದ ಒಂದು ಸ್ವರ್ಗೀಯ ಕರೆಯುವಿಕೆಯನ್ನು ನಾವು ನೆರವೇರಿಸಲು ಸಾಧ್ಯವಿಲ್ಲ. ಕರೆಯುವಿಕೆ ಮತ್ತು ಆ ಕರೆಯುವಿಕೆಯನ್ನು ನೆರವೇರಿಸುವ ವಿಧಾನಗಳೆರಡು ದೇವರಿಂದ ಬರಬೇಕು. ಅಪೋಸ್ತಲನಾದ ಪೌಲನು ಹೀಗೆ ಬರೆದನು, *"ಆದರೆ ನಾನು ತಾಯಿಯ ಗರ್ಭದಲ್ಲಿದ್ದಾಗಲೇ ನನ್ನನ್ನು ಪ್ರತ್ಯೇಕಿಸಿ ತನ್ನ ಕೃಪೆಯಿಂದ ಕರೆದ ದೇವರು ತನ್ನ ಮಗನನ್ನು ನಾನು ಅನ್ಯಜನರಲ್ಲಿ ಪ್ರಸಿದ್ಧಿಪಡಿಸುವವನಾಗಬೇಕೆಂದು ಆತನನ್ನು ನನ್ನೊಳಗೆ ಪ್ರಕಟಿಸುವದಕ್ಕೆ ಇಚ್ಛೈಸಿದಾಗಲೇ ನಾನು ಮನುಷ್ಯರ ಆಲೋಚನೆಯನ್ನು ವಿಚಾರಿಸದೆ"* (ಗಲಾತ್ಯದವರಿಗೆ 1:15,16). ದೇವರ ಕರೆಯುವಿಕೆಯನ್ನು ನೆರವೇರಿಸಲು ನಾವು ಮಾಡುವ ಸಂಗತಿಗಳು-ವಿಚಾರಗಳು, ವಿಧಾನಗಳು, ಕಾರ್ಯಕ್ರಮಗಳು ಮತ್ತು ತಂತ್ರಗಳು ದೇವರು ನಮ್ಮ ಹೃದಯಗಳಲ್ಲಿ ಹಾಕಿರುವವುಗಳೋ ಅಥವಾ ಅವುಗಳು ಸ್ವಯಂ ನಮ್ಮದೋ? ಅದು ಸ್ವರ್ಗದಿಂದ ಬಂದದ್ದೋ ಅಥವಾ ಶರೀರದಿಂದ ಬಂದದ್ದೋ? ಅವುಗಳ ಹಿಂದಿರುವ ಉದ್ದೇಶಗಳೇನು? ನಾವು ಆತ್ಮನನ್ನು ಹಿಂಬಾಲಿಸುತ್ತಿದ್ದೇವೋ ಅಥವಾ ನಾವು ಮನುಷ್ಯನನ್ನು ಅನುಕರಿಸುತ್ತಿದ್ದೇವೋ?

ಪವಿತ್ರಾತ್ಮನ ನಡಿಸುವಿಕೆಗೆ ನಮ್ಮ ವಿಚಾರಗಳನ್ನು ನಾವು ಅಧೀನ ಮಾಡಬೇಕು. ನಾವು ಕರ್ತನ ಸೇವೆ ಮಾಡುವದಕ್ಕೂ ಮತ್ತು ಆತನ ರಾಜ್ಯಕ್ಕಾಗಿ ಕೆಲಸ ಮಾಡುವದಕ್ಕೆ ಆಸಕ್ತಿಯುಳ್ಳವರಾಗಿರಬೇಕು, ಆದರೆ ಇದು ಪವಿತ್ರಾತ್ಮನ ನಡೆಸುವಿಕೆಗೆ ಅಧೀನವಾಗಿರಬೇಕು. ನಾವು "ಹೋಗುವದು" ಇತರರು "ಹೋಗುತ್ತಿರುವದರಿಂದಲ್ಲ" ಅಥವಾ ಇತರರು "ಹೋಗು" ಎಂದು ಹೇಳಿದ್ದರಿಂದಲ್ಲ. ದೇವರು ನಮ್ಮನ್ನು ಕಳುಹಿಸುತ್ತಾ ಇರುವ ಕಾರಣದಿಂದ ನಾವು "ಹೋಗಬೇಕು" ಮತ್ತು ಆತನು ಎಲ್ಲಿಗೆ ನಮ್ಮನ್ನು

ಕಳುಹಿಸುತ್ತಾನೋ ಅಲ್ಲಿಗೆ ನಾವು ಹೋಗಬೇಕು. ದಾರಿಯ ಪ್ರತಿ ಹೆಜ್ಜೆಯಲ್ಲಿ ಆತನ ನಡಿಸುವಿಕೆಯನ್ನು ಹಿಂಬಾಲಿಸುವದೇ ದೇವರ ಕರೆಯುವಿಕೆಯನ್ನು ನೆರವೇರಿಸುವದರ ಕೀಲಿಯಾಗಿದೆ.

# 6
# ತುಂಬಾ ಶ್ರೇಷ್ಟವಾದ ಒಂದು ಕ್ರಯ

ದೇವರ ಕರೆಯುವಿಕೆಯು ಕ್ರಯವಿಲ್ಲದೆ ಬರುವದಿಲ್ಲ. ಅಲ್ಲಿ ಅನೇಕ ತ್ಯಾಗಗಳನ್ನು ಮಾಡಬೇಕು, ಹಿಂಸೆಗಳು ಮತ್ತು ಸಂಕಷ್ಟಗಳನ್ನು ಸಹಿಸಿಕೊಳ್ಳಬೇಕು, ಅಪಾಯಗಳನ್ನು ತೆಗೆದುಕೊಳ್ಳಬೇಕು ಮತ್ತು ಇನ್ನಷ್ಟು. ಯೇಸು ತನ್ನನ್ನು ಹಿಂಬಾಲಿಸುವದರ ಕ್ರಯದ ಕುರಿತು ಮಾತನಾಡಿದನು. ಆತನು ನಮಗೆ ವೆಚ್ಚವನ್ನು ಎಣಿಸಬೇಕೆಂಬದಾಗಿ ಹೇಳಿದನು.

**ಲೂಕ 14:28-33**

**28 ನಿಮ್ಮಲ್ಲಿ ಯಾವನಾದರೂ ಒಂದು ಬುರುಜನ್ನು ಕಟ್ಟಿಸಬೇಕೆಂದು ಯೋಚಿಸಿದರೆ ಅವನು ಮೊದಲು ಕೂತುಕೊಂಡು ಅದಕ್ಕೆ ಎಷ್ಟು ಖರ್ಚು ಹಿಡಿದೀತು, ಅದನ್ನು ತೀರಿಸುವದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕ ಮಾಡುವದಿಲ್ಲವೇ?**

**29 ಹೀಗೆ ಲೆಕ್ಕಮಾಡದೆ ಅದಕ್ಕೆ ಅಸ್ತಿವಾರ ಹಾಕಿದ ಮೇಲೆ ಆ ಕೆಲಸವನ್ನು ಪೂರೈಸಲಾರದೆ ಹೋದರೆ ನೋಡುವವರೆಲ್ಲರು**

**30 ಈ ಮನುಷ್ಯನು ಕಟ್ಟಿಸುವದಕ್ಕಂತೂ ತೊಡಗಿದನು, ಕೆಲಸ ಪೂರೈಸಲಾರದೆ ಹೋದನು ಎಂದು ಅವನನ್ನು ಹಾಸ್ಯ ಮಾಡಾರು.**

**31 ಇಲ್ಲವೆ ಯಾವ ಅರಸನಾದರೂ ಮತ್ತೊಬ್ಬ ಅರಸನ ಸಂಗಡ ಯುದ್ಧ ಮಾಡುವದಕ್ಕೆ ಹೋಗುವಾಗ ತನ್ನ ಮೇಲೆ ಇಪ್ಪತ್ತು ಸಾವಿರ ದಂಡು ತೆಗೆದುಕೊಂಡು ಬರುವವನನ್ನು ತಾನು ಹತ್ತು ಸಾವಿರ ದಂಡಿನಿಂದ ಎದುರಿಸುವದಕ್ಕೆ ಶಕ್ತನಾಗುವೆನೋ ಇಲ್ಲವೋ ಎಂದು ಕೂತುಕೊಂಡು ಆಲೋಚಿಸುವದಿಲ್ಲವೇ?**

**32 ತಾನು ಶಕ್ತನಲ್ಲದಿದ್ದರೆ ಬರುವ ಅರಸನು ಇನ್ನೂ ದೂರದಲ್ಲಿರುವಾಗಲೇ ರಾಯಭಾರಿಗಳನ್ನು ಕಳುಹಿಸಿ ಸಂಧಾನಕ್ಕೆ ಒಪ್ಪಂದವನ್ನು ಕೇಳಿಕೊಳ್ಳುವನು.**

**33 ಹಾಗೆಯೇ ನಿಮ್ಮಲ್ಲಿ ಯಾವನೇ ಆಗಲಿ ತನಗಿರುವದನ್ನೆಲ್ಲಾ ಬಿಟ್ಟುಬಿಡದೆ ಹೋದರೆ ಅವನು ನನ್ನ ಶಿಷ್ಯನಾಗಿರಲಾರನು.**

ಯೇಸುವನ್ನು ಹಿಂಬಾಲಿಸುವದರ ಕ್ರಯವೇನು? ಸರ್ವವೂ! ಯೇಸು ನಾವು ಎಲ್ಲವೂ ಬಿಟ್ಟುಬಿಡಬೇಕೆಂಬದಾಗಿ ಹೇಳಿದನು. “ಬಿಟ್ಟು ಬಿಡುವದರ” ಅರ್ಥ ನಾವು ಇನ್ನು ಎಷ್ಟು ಮಾತ್ರಕ್ಕೂ ಅವುಗಳನ್ನು ಸ್ವಂತವಾಗಿ ಹೊಂದಿಲ್ಲ. ದೇವರು ಅದನ್ನು ಸ್ವಂತವಾಗಿ ಹೊಂದಿದ್ದಾನೆ ಮತ್ತು ನಮ್ಮ ಬಳಿ ಇರುವಂತವುಗಳ ಮೂಲಕ ತಾನು ಮಾಡಬೇಕೆಂದು ಬಯಸುವ

ಯಾವುದನ್ನಾದರೂ ಮಾಡಲು ಆತನು ನಮಗೆ ಹೇಳಬಹುದು. ನಮ್ಮ ಬಳಿ ಏನಿದೆ ಅಥವಾ ಎಷ್ಟಿದೆ ಎಂಬುದಲ್ಲಾ. ಅವೆಲ್ಲವನ್ನು ನಾವು ಕರ್ತನಿಗೆ ಒಪ್ಪಿಸಿ ಬಿಟ್ಟಿದ್ದೇವಾ? ಅಥವಾ ಯಾವುದಾದರೂ ಸಂಗತಿಗಳು–ಆಸ್ತಿಗಳು, ಯೋಜನೆಗಳು, ಕನಸುಗಳು, ಮಹತ್ವಾಕಾಂಕ್ಷೆಗಳು, ಸಂಬಂಧಗಳು, ಚಟಗಳು ನಮ್ಮ ಜೀವನದಲ್ಲಿ ಇದೆಯೇ–ದೇವರು ನಮಗೆ ಬಿಟ್ಟು ಬಿಡು, ಕೊಟ್ಟು ಬಿಡು, ಪಕ್ಕಕ್ಕೆ ಇಡು ಅಥವಾ ಅದಿಲ್ಲದೆ ಮಾಡು ಎಂದು ಹೇಳಿದರೆ ನಮಗೆ ಮಾಡಲು ಕಷ್ಟವಾಗುತ್ತದೆಯೇ? ದೇವರು ನಮ್ಮ ಹಣಗಳಿಗೆ ಒಡೆಯನಾಗಿದ್ದಾನೆಯೇ ಅಥವಾ ನಾವೇ ಏಕಮಾತ್ರ ಮಾಲೀಕರಾಗಿದ್ದೇವೆಯೇ? ನಮ್ಮ ಬಳಿಯಿರುವ ಹಣದಿಂದ ಆತನು ಏನು ಮಾಡಲು ಬಯಸುತ್ತಾನೆ ಎಂದು ನಮಗೆ ಹೇಳಲು ಅಥವಾ ನಮ್ಮೊಂದಿಗೆ ಮಾತನಾಡಲು ದೇವರಿಗೆ ಸ್ವಾತಂತ್ರ್ಯವಿದೆಯೇ? ಆತನು ಎಲ್ಲಿ ಬಿತ್ತಲು ಬಯಸುತ್ತಾನೋ ಅಲ್ಲಿ ಬೀಜಗಳನ್ನು ಬಿತ್ತಲು ನಾವು ಮನಸ್ಸುಳ್ಳವರಾಗಿದ್ದೇವೆಯೇ? ನಾವು ಎಷ್ಟು ಬಿಟ್ಟು ಬಿಡುತ್ತೇವೆ ಎಂಬುದಲ್ಲ, ಆದರೆ ಯಾವುದನ್ನು ನಾವು ಬಿಟ್ಟುಬಿಡುವದಿಲ್ಲ, ಅದು ದೇವರ ಕರೆಯುವಿಕೆಯನ್ನು ನಾವು ನೆರವೇರುಸುತ್ತೇವಾ ಅಥವಾ ಇಲ್ಲವಾ ಎಂದು ನಿರ್ಧರಿಸುತ್ತದೆ. ಕೆಲವರು ಬಹಳಷ್ಟನ್ನು ಕೊಟ್ಟು ಬಿಟ್ಟಿದ್ದಾರೆ, ಆದರೆ ಇನ್ನೂ ಕೆಲವರಿದ್ದಾರೆ ಅವರು ಬಿಟ್ಟು ಕೊಡದ ಸಣ್ಣ ಸಂಗತಿಗಳಿವೆ ಅವುಗಳು ಅವರ ಜೀವಿತಗಳ ಮೇಲಿರುವ ದೇವರ ಕರೆಯುವಿಕೆಯ ಸಂಪೂರ್ಣತೆಗೆ ಅವರು ಪ್ರವೇಶಿಸದಂತೆ ಅಡ್ಡಿ ಮಾಡುತ್ತದೆ. ಆ ಕೆಲವು ಸಂಗತಿಗಳನ್ನು ಬಿಟ್ಟು ಕೊಡುವ ವೆಚ್ಚವು ಇತರ ಎಲ್ಲಾ ಸಂಗತಿಗಳನ್ನು ಬಿಟ್ಟು ಕೊಡುವದಕ್ಕಿಂತ ಬಹು ಹೆಚ್ಚಾಗಿದೆ. ಆದರೆ ಕರ್ತನು ಅದನ್ನೇ ಕೇಳುತ್ತಿದ್ದಾನೆ! ಪಾವತಿಸಲು ಕ್ರಯ ತುಂಬಾ ದೊಡ್ಡದಾಗಿದೆಯೇ? ನಮ್ಮ ಜೀವಿತದ ಮೇಲೆ ತಂದೆಯ ಅನುಮೋದನೆಯನ್ನು ಹೊಂದುವ ಪ್ರತಿಫಲವು ತುಂಬಾ ದೊಡ್ಡದು ಎಂದು ನೆನಪಿನಲ್ಲಿಡಿ! ನಿಮ್ಮ ಜೀವಿತಗಳ ಮೇಲಿರುವ ದೇವರ ಕರೆಯುವಿಕೆಯನ್ನು ನೆರವೇರಿಸಲು ನೀವು ಕ್ರಯವನ್ನು ಕಟ್ಟುತ್ತೀರಾ?

# 7
# ಭಯ–ಒಂದು ಮಾರಣಾಂತಿಕ ಶತ್ರು

ಭಯದ ನಿಮಿತ್ತದಿಂದ ಅನೇಕರು ದೇವರ ಕರೆಯುವಿಕೆಯನ್ನು ರಾಜೀ ಮಾಡಿಕೊಳ್ಳುತ್ತಾರೆ–ಸೋಲಿನ ಭಯ, ಭವಿಷ್ಯತ್ತಿನ ಭಯ, ಕೊರತೆಯ ಭಯ ಮತ್ತು ಮನುಷ್ಯನ ಭಯ. ಭಯವು ಅವರನ್ನು ಬಂಧಿಸಿರುವದರಿಂದ ಅವರು ಹೊರಗೆ ಹೆಜ್ಜೆ ಇಡುವದಿಲ್ಲ ಮತ್ತು ದೇವರ ಕರೆಯೊಳಗೆ ಪ್ರವೇಶಿಸುವದಿಲ್ಲ. "ನಾನು ಹೊರಟು ಹೋಗಿ ಒಂದು ನಿರ್ಧಿಷ್ಟವಾದ ಸ್ಥಳದಲ್ಲಿ ಸಭೆಯನ್ನು ಸ್ಥಾಪಿಸಬೇಕೆಂದು ದೇವರು ಬಯಸುತ್ತಾನೆ, ಆದರೆ ಒಂದು ವೇಳೆ ನಾನು ಸೋತು ಹೋದರೆ? ಸಭೆಯು ಅಲ್ಲಿ ಎಂದಿಗೂ ಬೆಳಯದೆ ಹೋದರೆ ಹೇಗೆ?" ಎಂದು ಕೆಲವರು ಆಲೋಚಿಸುತ್ತಿರಬಹುದು, ಸೋಲಿನ ಭಯವು ಅವರನ್ನು ಹೊರಗೆ ಹೆಜ್ಜೆ ಇಡದಂತೆ ಅವರನ್ನು ತಡೆಹಿಡಿಯುತ್ತದೆ. *ಕ್ರಿಸ್ತನಲ್ಲಿ ಜಯ ಹೊಂದುವಂತೆ* ದೇವರು ನಮ್ಮನ್ನು ನಡೆಸುತ್ತಾನೆ ಎಂಬದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು (2 ಕೊರಿಂಥದವರಿಗೆ 2:14). ಆದಕಾರಣ, ನಮ್ಮ ಆಶ್ರಯವನ್ನು ದೇವರ ಮೇಲೆ ಇಡುತ್ತೇವೆ. ಸೋಲು ಮತ್ತು ಗೆಲುವನ್ನು ಸಹ ನಾವು ದೇವರ ದೃಷ್ಟಿಕೋನದಿಂದ ನೋಡಬೇಕು. ಯಶಸ್ಸು ಎಂದರೆ ದೇವರ ಚಿತ್ತವನ್ನು ಮಾಡುವದು ಮತ್ತು ನಮಗೆ ಅತನು ಆಜ್ಞಾಪಿಸಿದ್ದನ್ನು ನೆರವೇರಿಸುವದು. ಅದು ಸಂಖ್ಯೆಗಳಲ್ಲಿಲ್ಲ, ಸಾಧನೆಗಳಲ್ಲಿಲ್ಲ ಮತ್ತು ಖ್ಯಾತಿಯಲ್ಲಿಲ್ಲ.

ಕೆಲವರು ಭವಿಷ್ಯತ್ತಿನ ಭಯದಲ್ಲಿ ಬಂಧಿಸಲ್ಪಟ್ಟಿದ್ದಾರೆ. "ಈಗ ನಾನು ದೇವರು ಏನು ಮಾಡಬೇಕೆಂದು ಬಯಸುತ್ತಾನೋ ಅದನ್ನು ನಾನು ಒಂದು ವೇಳೆ ಮಾಡಿದರೆ, ಅದರ ನಂತರ ಏನು ನಡೆಯುತ್ತದೆ?" ಎಂದು ಅವರು ಆಲೋಚಿಸುತ್ತಾರೆ, ಅವರು ಭವಿಷ್ಯತ್ತನ್ನು ಕಾಣದಿರುವದರಿಂದ ಅವರು ಭಯ ಪಡುವವರಾಗಿದ್ದಾರೆ. ದೇವರು ಎಲ್ಲವನ್ನೂ ಒಂದೇ ಬಾರಿಗೆ ತೋರಿಸುವದಿಲ್ಲ. ಒಂದು ಸಮಯದಲ್ಲಿ ಒಂದು ಹೆಜ್ಜೆ-ಆತನು ನಮ್ಮನ್ನು ಮುನ್ನಡೆಸುತ್ತಾನೆ. ಅಂತ್ಯದಿಂದ ಪ್ರಾರಂಭದ ವರೆಗೆ ದೇವರು ತಿಳಿದವನಾಗಿದ್ದಾನೆ. ಮುಂದೇನು ಬರುತ್ತದೆ ಎಂದು ಆತನು ತಿಳಿದಿದ್ದಾನೆ. ನಾವೇನು ಮಾಡಬೇಕೆಂದರೆ ಆತನ

ಮೇಲೆ ಭರವಸವಿಡಬೇಕು ಮತ್ತು ಜೀವನದ ಪ್ರಸ್ತುತ ಕಾಲದಲ್ಲಿ ಆತನು ಏನು ಮಾಡಲು ಬಯಸುತ್ತಾನೋ ಅದನ್ನು ಮಾಡಬೇಕು. ನಾವು ಯೋಜನೆ ಮಾಡುವದು ಪ್ರಾಮುಖ್ಯ ಆದರೆ ಅದಕ್ಕಿಂತಲೂ ಹೆಚ್ಚಾಗಿ ದೇವರಿಗೆ ವಿಧೇಯರಾಗುವದು ಪ್ರಾಮುಖ್ಯ. ಕೆಲವೊಂದು ಸಮಯದಲ್ಲಿ, ಕರ್ತನ ವಾಕ್ಯ ಮತ್ತು ಆತನ ನಿರ್ದೇಶನಗಳು ನಾವು ಅಲೋಚಿಸುವ ಯೋಜನೆಗಳಿಗೆ ಅವುಗಳು ಸರಿಹೊಂದದೆ ಹೋಗಬಹುದು ಆದರೂ ಸಹ ನಾವು ಇನ್ನೂ ವಿಧೇಯರಾಗಬೇಕು!

ಕೆಲವರು ಕೊರತೆಯ ಭಯದಲ್ಲಿ ಬಂಧಿಸಲ್ಪಟ್ಟಿದ್ದಾರೆ. ದೇವರು ಅವರಿಗೆ ಏನು ಮಾಡಬೇಕೆಂದು ಕರೆಯುತ್ತಿದ್ದಾನೋ ಒಂದು ವೇಳೆ ಅವುಗಳನ್ನು ಮಾಡಿದರೆ ಅವರ ಅನುದಿನದ ಅಗತ್ಯತೆಗಳು ಒದಗಿಸಲ್ಪಡುವದಿಲ್ಲ ಎಂಬದಾಗಿ ಅವರು ಭಯಪಡುತ್ತಾರೆ. ಯೇಸು ನಮಗೆ ಹೀಗೆ ಹೇಳಿದನು, *"ನಿಮಗೆ ದೇವರಲ್ಲಿ ನಂಬಿಕೆಯಿರಲಿ"* (ಮಾರ್ಕ 11:22). ದೇವರು ಒದಗಿಸುತ್ತೇನೆ ಎಂದು ವಾಗ್ದಾನ ಮಾಡಿದ್ದಾನೆ. ಆತನ ವಾಕ್ಯದಲ್ಲಿರುವ ನಂಬಿಕೆ ನಿಮ್ಮ ಹೃದಯದಲ್ಲಿರುವ ಭಯವನ್ನು ಹೊರಗೆ ಹಾಕಲಿ!

ಇತರರು ಮನುಷ್ಯರ ಭಯದಲ್ಲಿ ಬಂಧಿಸಲ್ಪಟ್ಟಿದ್ದಾರೆ. ಅವರು ಇತರರಿಂದ ಬೆದರಿಸಲ್ಪಡುತ್ತಾರೆ-ಅವರನ್ನು ಹಿಂಸಿಸಬಹುದಾದ ಜನರಿಂದ. ಕೆಲವೊಮ್ಮೆ, ಬಹುಶಃ ಇತರ ಸೇವಕರಿಂದಲೂ ಸಹ. ಸತ್ಯವೇದವು ಹೇಳುತ್ತದೆ, *"ಮನುಷ್ಯನ ಭಯ ಉರುಲು; ಯೆಹೋವನ ಭರವಸ ಉದ್ಧಾರ"* (ಜ್ಞಾನೋಕ್ತಿಗಳು 29:25). ದೇವರ ಮೇಲೆ ಭರವಸವಿಡುವದರಿಂದ, ನಿಮ್ಮನ್ನು ಇದುವರೆಗೆ ತಡೆ ಹಿಡಿದಿರುವ ಭಯದ ವಿರುದ್ಧವಾಗಿ ಹೊರಗೆ ಹೆಜ್ಜೆ ಹಾಕಬಹುದು. ಯೆಹೋಶುವನು ನಾಯಕತ್ವವನ್ನು ವಹಿಸಿಕೊಂಡಾಗ ಕರ್ತನು ಅವನಿಗೆ ಏನು ಹೇಳಿದನು ಎಂದು ನೆನಪಿಸಿಕೊಳ್ಳಿರಿ. *"ನಾನು ನಿನಗೆ ಆಜ್ಞಾಪಿಸಿದ್ದೇನಲ್ಲಾ; ಸ್ಥಿರಚಿತ್ತನಾಗಿರು, ಧೈರ್ಯದಿಂದಿರು. ಅಂಜಬೇಡ, ಕಳವಳಗೊಳ್ಳಬೇಡ. ನೀನು ಹೋಗುವಲ್ಲೆಲ್ಲಾ ನಿನ್ನ ದೇವರಾದ ಯೆಹೋವನು ನಿನ್ನ ಸಂಗಡ ಇರುತ್ತಾನೆ ಎಂದು ಹೇಳಿದನು"* (ಯೆಹೋಶುವ 1:9). ಕರ್ತನಲ್ಲಿ ಧೈರ್ಯವಾಗಿರ್ರಿ. ದೇವರಲ್ಲಿನ ನಿನ್ನ ನಂಬಿಕೆಯು ಆತನ ಕರೆಯುವಿಕೆಗೆ ವಿಧೇಯವಾಗುವಂತೆ ನಿನ್ನನ್ನು ಬಿಡುಗಡೆ ಮಾಡಲಿ!!

# 8
# ತೀರ್ಮಾನವು ನಿಮ್ಮದು

ದೇವರೊಂದಿಗೆ ನಮ್ಮ ನಡೆಯ ಬಗ್ಗೆ ಒಂದು ಅದ್ಭುತವಾದ ಸಂಗತಿಯೇನೆಂದರೆ, ನಾವು ಕರ್ತನನ್ನು ಹುಡುಕಲು ನಮ್ಮ ಹೃದಯದಲ್ಲಿ ಉದ್ದೇಶಿಸಬಹುದು ಮತ್ತು ಹಾಗೆ ಮಾಡಬಹುದು. ನಾವು ಪಶ್ಚಾತ್ತಾಪಪಟ್ಟು ಬದಲಾಗಬಹುದು. ನಾವು ದೇವರೊಂದಿಗೆ ಮುಂದುವರಿಯಬಹುದು. ವಾಸ್ತವವಾಗಿ ನಾವು ಹಾಗೆ ಮಾಡಬೇಕು. ಆದರೆ, ನಾವು ತಪ್ಪಾದ ಆಯ್ಕೆಗಳನ್ನು ಮಾಡಿದಾಗ ಮತ್ತು ರಾಜೀಯನ್ನು ಮಾಡಿಕೊಂಡಾಗ ಮತ್ತು ತೊಂದರೆಗೆ ಸಿಲುಕಿದಾಗಲೂ ನಮ್ಮನ್ನು ಹೊರಗೆ ತರಲು ಕರ್ತನಿಗೆ ಸಾಧ್ಯವಿದೆ. ಕೀರ್ತನೆಗಾರನು ಹೀಗೆ ಹೇಳುತ್ತಾನೆ, *"ನನ್ನನ್ನು ನಾಶನದ ಗುಂಡಿಯೊಳಗಿಂದ ಎತ್ತಿದನು; ಕೆಸರಿನೊಳಗಿಂದ ನನ್ನನ್ನು ತೆಗೆದು ಬಂಡೆಯ ಮೇಲೆ ನಿಲ್ಲಿಸಿ ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು"* (ಕೀರ್ತನೆಗಳು 40:2). ನಾವು ಮಾಡಬೇಕಾದ ಪ್ರಮುಖ ವಿಷಯವೇನೆಂದರೆ ನಮ್ಮ ಜೀವನವನ್ನು ಸತ್ಯತೆಯಲ್ಲಿ ಪರಿಶೀಲಿಸಬೇಕು ಮತ್ತು ಅಗತ್ಯ ಬದಲಾವಣೆಯನ್ನು ಮಾಡಿಕೊಳ್ಳಲು ದೇವರ ಬಲವನ್ನು ಹೊಂದಿಕೊಳ್ಳಬೇಕು.

ನೀನು ನಿನ್ನ ಕರೆಯುವಿಕೆಯನ್ನು ರಾಜೀ ಮಾಡಿಕೊಂಡಿದ್ದಿಯೋ? ನಿನ್ನ ಪೂರ್ಣ ಹೃದಯದಿಂದ ದೇವರ ಕರೆಯುವಿಕೆಯನ್ನು ಹಿಂದಟ್ಟುತ್ತಿದ್ದಿಯೋ?ನಿನ್ನ ಜೀವಿತದ ಮೇಲಿರುವ ದೇವರ ಕರೆಯುವಿಕೆಗೆ ಸಂಪೂರ್ಣವಾಗಿ ಸರಿಹೊಂದಿಸಿಕೊಳ್ಳಲು ಇಂದು ನೀನು ಏನು ಬದಲಾವಣೆಗಳನ್ನು ಮಾಡಿಕೊಳ್ಳಬೇಕು?

ನಮಗೊಂದು ಆಯ್ಕೆಯಿದೆ. ನಾವು ರಕ್ಷಣೆ ಹೊಂದಿದ ಜೀವನದಲ್ಲಿ ನಡೆಯಬಹುದು ಆದರೂ ನಮ್ಮ ಪೂರ್ಣ ಹೃದಯದಿಂದ ದೇವರ ಕರೆಯುವಿಕೆಯನ್ನು ಹಿಂದಟ್ಟದೆ ಸಹ ಇರಬಹುದು. ನಾವು ಹೇಗೂ ಪರಲೋಕ ಸೇರಿಕೊಳ್ಳಬಹುದು ಆದರೆ ನಿತ್ಯತ್ವಕ್ಕೆ ನಮ್ಮೊಂದಿಗೆ ತೆಗೆದುಕೊಂಡು ಹೋಗುವದಕ್ಕೆ ಯಾವುದೇ ಫಲ ಅಲ್ಲಿ ಇರುವದಿಲ್ಲ. ಮತ್ತೊಂದೆಡೆ, ನಮ್ಮ

ಜೀವಿತದಲ್ಲಿ ದೇವರ ಕರೆಯುವಿಕೆಯನ್ನು ಹುಡುಕಲು ಮತ್ತು ನೆರವೇರಿಸಲು ಅಗತ್ಯವಿರುವ ಎಲ್ಲದನ್ನು ಮಾಡಬಹುದು. ಭೂಮಿಯ ಮೇಲೆ ನಾವು ಮೂರ್ಖರಾಗಿ ಕಾಣಿಸಬಹುದು. ಹೇಗಿದ್ದರೂ, ನಾವು ಪರಲೋಕಕ್ಕೆ ಹೋಗುವಾಗ ಮತ್ತು ನಮ್ಮ ಕೆಲಸಗಳು ಬೆಂಕಿಯಿಂದ ಶೋಧಿಸಲ್ಪಡುವಾಗ ನಿತ್ಯತ್ವಕ್ಕೆ ಉಳಿಯುವ ಫಲವನ್ನು ನಾವು ಹೊಂದುತ್ತೇವೆ. ಅಪೋಸ್ತಲನಾದ ಪೌಲನು ತಿಮೋಥಿಗೆ ಹೀಗೆ ಬುದ್ಧಿ ಹೇಳಿದನು, *"ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು"* (2 ತಿಮೊಥೆಯನಿಗೆ 2:15). ನಾಚಿಕೆ ಹೊಂದದೆ ದೇವರಿಂದ ಅನುಮೋದಿಸಲ್ಪಟ್ಟ ಕೆಲಸಗಾರರಾಗಲು ನಮ್ಮ ಕಡೆಯಿಂದ ಸ್ವಲ್ಪ ಪ್ರಯತ್ನದ ಅಗತ್ಯವಿದೆ. ದೇವರ ಕರೆಯುವಿಕೆಯನ್ನು ನೆರವೇರಿಸಲು ನಮ್ಮನ್ನು ಸಿದ್ಧಮಾಡಿಕೊಳ್ಳಲು ಸಮಯ ಮತ್ತು ಪ್ರಯತ್ನದ ಅಗತ್ಯವಿದೆ. ಅಲ್ಲಿ ತ್ಯಾಗಗಳು ಮತ್ತು ಸವಾಲುಗಳು ಇರುತ್ತವೆ. ಆದರೆ ನಾವು ನಮ್ಮ ಉತ್ತಮವಾದದ್ದನ್ನು ಮಾಡಬೇಕು.

ಈ ಕೊನೆಯ ಗಂಟೆಯಲ್ಲಿ, ತನ್ನ ಕರೆಯುವಿಕೆಗೆ 100% ಬದ್ಧರಾಗಿರುವ ಪುರುಷರು ಮತ್ತು ಸ್ತ್ರೀಯರು ದೇವರಿಗೆ ಅಗತ್ಯವಾಗಿದ್ದಾರೆ. ಆತನಿಗೆ ಸಂಪೂರ್ಣವಾಗಿ ಮಾರಾಟವಾದ ಜನರು—ರಾಜೀ ಮಾಡಿಕೊಳ್ಳದ ಜನರು ಬೇಕು.

ಅಪೋಸ್ತಲನಾದ ಪೌಲನ ಮಾತುಗಳಿಂದ ನಿಮ್ಮನ್ನು ಪ್ರೋತ್ಸಾಹ ಮಾಡಲು ನಾವು ಬಯಸುತ್ತೇವೆ.

**ಫಿಲಿಪ್ಪಿಸ್ಯದವರಿಗೆ 3:12-14**

**12 ಇಷ್ಟರೊಳಗೆ ನಾನು ಬಿರುದನ್ನು ಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವದಿಲ್ಲ; ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತ ಯೇಸು ನನ್ನನ್ನು ಹಿಡಿದುಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ.**

**13ಸಹೋದರರೇ, ನಾನಂತೂ ಹಿಡಿದುಕೊಂಡವನೆಂದು ನನ್ನನ್ನು ಈವರೆಗೂ ಎಣಿಸಿಕೊಳ್ಳುವದಿಲ್ಲ; ಆದರೆ ಒಂದು, ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು *ಮುಂದಿನವುಗಳನ್ನು ಹಿಡಿಯುವದಕ್ಕೆ* ಎದೆ ಬೊಗ್ಗಿದವನಾಗಿ**

**14ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ.**

ಯಾವುದನ್ನು ಹೊಂದಿಕೊಳ್ಳುವದಕ್ಕಾಗಿ ಯೇಸು ನಿಮ್ಮನ್ನು *"ಹಿಡಿದುಕೊಂಡನೋ ಅದನ್ನು ಹಿಡುಕೊಳ್ಳುವದಕ್ಕಾಗಿ"* (ಫಿಲಿಪ್ಪಿಯವರಿಗೆ 3:12) ಮುಂದೆ ಬೊಗ್ಗಿದವರಾಗಿ ಸಾಗಿರಿ. ಮುಕ್ತಾಯದ ಗೆರೆಯ ಕಡೆಗೆ ಬೊಗ್ಗಿದವರಾಗಿ ಸಾಗಿರಿ. ನಿಮ್ಮ ಸ್ವರ್ಗೀಯ ಕರೆಯುವಿಕೆಯಲ್ಲಿ ಬೊಗ್ಗಿದವರಾಗಿ ಸಾಗಿರಿ. ಇದಕ್ಕೆ ಸ್ವಲ್ಪ ಪ್ರಯತ್ನದ ಅಗತ್ಯವಿದೆ ಅದರೆ ಅದು ಮೌಲ್ಯವುಳ್ಳದಾಗಿರುತ್ತದೆ! ನಿಮ್ಮ ಜೀವಿತದ ಮೇಲಿರುವ ದೇವರ ಕರೆಯುವಿಕೆಯನ್ನು ರಾಜೀ ಮಾಡಿಕೊಳ್ಳಬೇಡಿರಿ!!

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಶಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ" ಎಂದು ಹೇಳುತ್ತದೆ*** **(ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ - ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."* (ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"* (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ*

*ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.*

*ಆಮೇನ್.*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜ್ಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work—Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

| | |
|---|---|
| **ಹದಿಹರೆಯದವರು** | **ವರ್ತನೆಯ ಅಸ್ತವ್ಯಸ್ತತೆಗಳು** |
| **ವಯಕ್ತಿಕ ಹೊಂದಾಣಿಕೆಗಳು** | **ವ್ಯಕ್ತಿತ್ವ ಅಸ್ತವ್ಯಸ್ತತೆಗಳು** |
| **ಸಂಭಂದಿತ ಸವಾಲುಗಳು** | **ಮಾನಸಿಕ/ಭಾವನಾತ್ಮಕ ಸಮಸ್ಯೆಗಳು** |
| **ಶೈಕ್ಷಣಿಕ ಕಡಿಮೆ ಸಾಧನೆ** | **ಒತ್ತಡ/ಆಘಾತ** |
| **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು** | **ಮಧುಪಾನ/ಮಾದಕವಸ್ತು ದುರುಪಯೋಗ** |
| **ಕುಟುಂಬ/ದಂಪತಿಗಳು: ವಿವಾಹಪೂರ್ವ, ವೈವಾಹಿಕ** | **ಆತ್ಮೀಕ ಸಮಸ್ಯೆಗಳು** |
| **ಪೋಷಕರು/ಮಕ್ಕಳು/ಒಡಹುಟ್ಟಿದವರು /ಗೆಳೆಯರು** | **ಜೀವನ ತರಬೇತಿ** |

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ: +91-80-25452617** ಅಥವಾ ಟೋಲ್ - ಫ್ರೀ (ಭಾರತದೊಳಗೆ) **1-800-300-00998**
**ಇಮೆಲ್: counselor@chrysalislife.org**

ಕ್ರಿಸಾಲಿಸ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru- 560043, Karnataka

***ದಯವಿಟ್ಟು ಗಮನಿಸಿ:** ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ **apcwo.org/give**.*

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು

**apcbiblecollege.org**

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಬುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ–ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

**ಅನ್ ಲೈನ್** ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ಹೇಗಿದ್ದರೂ, "ದೊಡ್ಡ" ಅಥವಾ "ಸಣ್ಣ" ಸಂಗತಿಗಳನ್ನು ಮಾಡಲು ಕರೆಯಲ್ಪಟ್ಟ ನಾವೆಲ್ಲರೂ ದೇವರ ಕರೆಯುವಿಕೆಯನ್ನು ನೆರವೇರಿಸಲು ನಮ್ಮನ್ನು ತಡೆಮಾಡುವ ಸವಾಲುಗಳನ್ನು ನಾವು ಎದುರಿಸುವವರಾಗಿದ್ದೇವೆ.

ನಾವು ವಿಚಲಿತರಾಗಿರಬಹುದು ಮತ್ತು ದೇವರ ರಾಜ್ಯವನ್ನು ಹಿಂದಟ್ಟುವ ಬದಲಾಗಿ ಯಶಸ್ಸು, ಸಂಪತ್ತು ಮತ್ತು ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು ಹಿಂದಟ್ಟುವದಕ್ಕಾಗಿ ನಾವು ನಮ್ಮ ಶಕ್ತಿಯನ್ನು ವ್ಯಯಿಸುತ್ತಿರಬಹುದು. ಪವಿತ್ರಾತ್ಮನು ನಮಗೆ ಕೊಟ್ಟ ಕನಸುಗಳು ಮತ್ತು ದರ್ಶನಗಳನ್ನು ಒಂದು ಮೂಲೆಯಲ್ಲಿ ಇಡಲಾಗಿದೆ.

ಈ ಪುಸ್ತಕದ ಉದ್ದೇಶ ನಮ್ಮನ್ನು ಕೆರಳಿಸುವದಾಗಿದೆ. ನಮ್ಮ ಮುಂದೆ ಇರಿಸಲಾಗಿರುವ ಓಟವನ್ನು ಮುಗಿಸದಂತೆ ಮತ್ತು ನಾವು ಶ್ರೇಷ್ಟ ಹೋರಾಟ ಮಾಡುವದರಲ್ಲಿ ಕೊರತೆಯಲ್ಲಿ ಬೀಳಿಸಿ, ನಾವು ಸಿಲುಕಿಕೊಳ್ಳಬಹುದಾದ ಕೆಲವು ಬಲೆಗಳ ಕುರಿತು ನಮ್ಮನ್ನು ಎಚ್ಚರಿಸುವದಕ್ಕೆ ಇದು ಉದ್ದೇಶಿಸಲಾಗಿದೆ.

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org